**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡ ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ**

**ಸೂಚನೆ:-**

ಬೆಂಗಳೂರು ನಗರ ಜಿಲ್ಲೆ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ಜಾಲ ಹೋಬಳಿಯಲ್ಲಿನ ನವರತ್ನ ಅಗ್ರಹಾರ, ಹುಣಸಮಾರನಹಳ್ಳಿ, ಕಾಡಗಾನಹಳ್ಳಿ, ಕುದುರೆಗೆರೆ, ಕಟ್ಟಿಗೇನಹಳ್ಳಿ, ತಿರುಮೇನಹಳ್ಳಿ, ಬೈಯಪ್ಪನಹಳ್ಳಿ ಹಾಗೂ ಬಾಗಲೂರು ಗ್ರಾಮಗಳಲ್ಲಿನ ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದಂತೆ ಈ ಗ್ರಾಮಗಳ ಕೆಲವು ಸ.ನಂ.ಗಳು ಸರ್ಕಾರಿ ಆಸ್ತಿಯಾಗಿದ್ದರೂ ಸಹ ಇಲಾಖೆಯ ಅಧಿಕಾರಿಗಳು ಖಾಸಗಿ ವ್ಯಕ್ತಿಗಳಿಗೆ ಪರಭಾರೆ ಮಾಡುತ್ತಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

****

**ಹೇಳಿಕೆ:-**

1) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಕಟ್ಟಿಗೇನಹಳ್ಳಿ ಗ್ರಾಮದ ಸ.ನಂ.28ಕ್ಕೆ ಸಂಬಂಧಿಸಿದಂತೆ ಒತ್ತುವರಿಯಾಗಿರುವ 6-05 ಗುಂಟೆ ಸರ್ಕಾರಿ ಜಮೀನನ್ನು ದಿನಾಂಕ 29.09.2023ರಂದು ಒತ್ತುವರಿ ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿದೆ. ಸ.ನಂ.28ರಲ್ಲಿ 2-00 ಎಕರೆ ಜಮೀನಿನ ಮಂಜೂರಾತಿಯನ್ನು ರದ್ದುಪಡಿಸಲು ವಿಶೇಷ ಜಿಲ್ಲಾಧಿಕಾರಿಗಳ ನ್ಯಾಯಾಲಯದ ಪ್ರಕರಣದ ಸಂಖ್ಯೆ.ಆರ್.ಆರ್.ಟಿ.(ವೈ.ಎಲ್.ಕೆ)/ ಸಿ.ಆರ್/8/19-20 ದಿನಾಂಕ 29.01.2020ರ ಆದೇಶದ ವಿರುದ್ಧ ಮಾನ್ಯ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದಲ್ಲಿ ಮೇಲ್ಮನವಿ ಸಲ್ಲಿಸಲು ದಿನಾಂಕ: 24.11.2025ರ ಆದೇಶದನ್ವಯ ಅನುಮತಿ ನೀಡಲಾಗಿದೆ.

ಮುಂದುವರೆದು, ಸ.ನಂ.28ರ 4-00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಶ್ರೀ ಮುನಿಕೆಂಪಣ್ಣ ಬಿನ್ ಪಿಳ್ಳಚನ್ನಪ್ಪ ರವರಿಗೆ ಮಂಜೂರಾಗಿರುವ ಬಾಬ್ತು ಯಾವುದೇ ದಾಖಲೆಗಳು ಲಭ್ಯವಿಲ್ಲದೆ ಇರುವುದರಿಂದ ಮಾನ್ಯ ಘನ ಉಚ್ಚ ನ್ಯಾಯಾಲಯದ ಪ್ರಕರಣ WA No. 1468/2024 C/w CCC No. 497/2024 ದಿನಾಂಕ 11.03.2025ರ ಆದೇಶದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಡೈರಿ ನಂ.63603/2024ರಂತೆ ಪ್ರಕರಣ ದಾಖಲಿಸಲಾಗಿದೆ ಹಾಗೂ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ರವರ ಪ್ರಕರಣ ಸಂಖ್ಯೆ:ಎಲ್.ಜಿ.ಸಿ(ಎಸ್)267/2023 ರಂತೆ ಪ್ರಕರಣ ದಾಖಲಾಗಿ ಪ್ರಕರಣ ದಾಖಲಿಸಲಾಗಿದ್ದು ವಿಚಾರಣಾ ಹಂತದಲ್ಲಿದೆ.

2) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಹುಣಸಮಾರನಹಳ್ಳಿ ಗ್ರಾಮದ ಸ.ನಂ.179ಕ್ಕೆ ಸಂಬಂಧಿಸಿದಂತೆ ವಿಶೇಷ ಜಿಲ್ಲಾಧಿಕಾರಿಯವರ ಆದೇಶಗಳ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ: WP No. 33313/2024, WP No.34008/2024, WP No. 33429/2024 ಮತ್ತು WP No.34916/2024 ರಂತೆ ಪ್ರಕರಣಗಳನ್ನು ದಾಖಲಿಸಲಾಗಿದೆ ಹಾಗೂ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ರವರ ಪ್ರಕರಣ ಸಂಖ್ಯೆ:ಎಲ್.ಜಿ.ಸಿ(ಎಸ್)267/2023 ರಂತೆ ಪ್ರಕರಣ ದಾಖಲಾಗಿ ಪ್ರಕರಣ ದಾಖಲಿಸಲಾಗಿದ್ದು ವಿಚಾರಣಾ ಹಂತದಲ್ಲಿರುತ್ತವೆ.

3) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಬಾಗಲೂರು ಗ್ರಾಮದ ಸ.ನಂ.175, ಹೊಸ ಸ.ನಂ.416ರ ಜಮೀನಿನ ಒತ್ತುವರಿ ಕುರಿತು ತಹಶೀಲ್ದಾರ್, ಯಲಹಂಕ ಇವರು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 104ರಡಿ ಒತ್ತುವರಿಯನ್ನು ತೆರವುಗೊಳಿಸಲು ದಿನಾಂಕ: 29.08.2023 ರಂದು ಆದೇಶ ಹೊರಡಿಸಿದ್ದು, ಒತ್ತುವರಿದಾರರು ಸದರಿ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದ WP No. 22137/2023 ರಂತೆ ದಾಖಲಿಸಿದ್ದು ಮಾನ್ಯ ನ್ಯಾಯಾಲಯವು ದಿನಾಂಕ: 11.10.2023ರಂತೆ ಆದೇಶ ಹೊರಡಿಸಿರುತ್ತದೆ. ಸದರಿ ಆದೇಶದ ವಿರುದ್ಧ ಸರ್ಕಾರವು WA No.1149/2024 ಅನ್ನು ದಾಖಲಿಸಲಾಗಿದೆ. ಸದರಿ ಜಮೀನಿನ ಒತ್ತುವರಿ ತೆರವುಗೊಳಿಸಲು ತಹಶೀಲ್ದಾರ್ ಯಲಹಂಕ ಇವರು ದಿನಾಂಕ: 27.03.2025ರಂದು ಹೊರಡಿಸಿರುವ ನೋಟಿಸಿನ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP No.11566/2025 ಹಾಗೂ WP No.11460/2025 ರಂತೆ ಪ್ರಕರಣಗಳು ದಾಖಲಾಗಿದ್ದು ಪ್ರಕರಣಗಳು ವಿಚಾರಣಾ ಹಂತದಲ್ಲಿರುತ್ತವೆ

4) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಕಾಡಿಗಾನಹಳ್ಳಿ ಗ್ರಾಮದ ಸ.ನಂ.23ರ ಜಮೀನಿಗೆ ಸಂಬಂಧಿಸಿದಂತೆ ಪ್ರಸ್ತುತ ಸ.ನಂ.ನಲ್ಲಿ 2-30 ಎಕರೆ/ಗುಂಟೆ ಸರ್ಕಾರಿ ಜಮೀನೆಂದು ಗುರುತಿಸಿದ್ದು, ಅದಕ್ಕೆ ಸರ್ಕಾರವೆಂದು ನಾಮಫಲಕ ಅಳವಡಿಸಲಾಗಿರುತ್ತದೆ. ಈ ಒಟ್ಟು ವಿಸ್ತೀರ್ಣದ ಪೈಕಿ ಹೊಸ ಸರ್ವೆ ನಂ.96 ಕ್ಕೆ 1-00 ಎಕರೆ ಜಮೀನು ದುರಸ್ತಿಗೆ ಒಳಪಡಿಸಿದ್ದು, ಉಳಿಕೆ 1-00 ಎಕರೆ ಜಮೀನನ್ನು ಅರ್ಹ ಫಲಾನುಭವಿಗಳಿಗೆ ಆಶ್ರಯ ಯೋಜನೆಯಡಿಯಲ್ಲಿ ಮಂಜೂರು ಮಾಡಲು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತರವರಿಗೆ ಹಸ್ತಾಂತರಿಸಲಾಗಿದೆ. ಉಳಿಕೆ 0-30 ಗುಂಟೆ ವಿಸ್ತೀರ್ಣದ ಬಗ್ಗೆ 94ಸಿಸಿ ರಡಿಯಲ್ಲಿ ಅರ್ಹ ಫಲಾನುಭವಿಗಳು ಕಟ್ಟಿರುವ ವಾಸದ ಮನೆಗಳಿಗೆ ಅನುಮತಿ ಕೋರಿದ್ದು, ಪ್ರಕರಣ ಪ್ರಗತಿಯಲ್ಲಿರುತ್ತದೆ. ಸದರಿ ಗ್ರಾಮದ ಜಮೀನುಗಳಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ

ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ:ಎಲ್.ಜಿ.ಸಿ(ಎಸ್)267/2023 ರಂತೆ ದಾಖಲಾಗಿ ವಿಚಾರಣಾ ಹಂತದಲ್ಲಿದೆ.

5) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಬ್ಯೆಯ್ಯಪ್ಪನಹಳ್ಳಿ ಗ್ರಾಮದ ಸ.ನಂ.80ರ ಜಮೀನಿಗೆ ಸಂಬಂಧಿಸಿದಂತೆ ಹಿಂದೆ ಬಗರ್ ಹುಕ್ಕುಂ ಸಾಗುವಳಿ ಸಕ್ರಮೀಕರಣಗೊಳಿಸುವ ಸಮಿತಿಯಲ್ಲಿ ಮಂಜೂರಾಗಿರುವ ಜಮೀನಿಗೆ ಸಂಬಂಧಿಸಿದಂತೆ ದರಖಾಸ್ತು ಪೋಡಿಯಂತೆ ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ ರವರು ಹೊರಡಿಸಿರುವ ಅಧಿಕೃತ ಜ್ಞಾಪನಕ್ಕೆ ತಡೆಯಾಜ್ಞೆ ನೀಡಿರುತ್ತಾರೆ, ಹಾಗೆಯೇ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಕ್ರಮ ವಹಿಸಲಾಗುತ್ತಿದೆ. ಸದರಿ ಗ್ರಾಮದ ಜಮೀನುಗಳಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ರವರ ಪ್ರಕರಣ ಸಂಖ್ಯೆ:ಎಲ್.ಜಿ.ಸಿ(ಎಸ್)267/2023 ರಂತೆ ಪ್ರಕರಣ ದಾಖಲಿಸಲಾಗಿದೆ.

6) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ನವರತ್ನ ಅಗ್ರಹಾರ ಗ್ರಾಮದ ಸ.ನಂ.3, 13, 67ರ ಜಮೀನಿಗೆ ಸಂಬಂಧಿಸಿದಂತೆ ಸದರಿ ಜಮೀನು ಮೂಲತ: ಇನಾಂ ಜಮೀನಾಗಿದ್ದು, ಇನಾಂ ರದ್ದಿಯಾತಿ ಕಾಯ್ದೆ 1954ರಡಿಯಲ್ಲಿ ಫಲಾನುಭವಿಗಳಿಗೆ ಮರು ಮಂಜೂರಾತಿ ಮಾಡಿರುವ ಪ್ರಕರಣವು ಸಾರ್ವಜನಿಕ ಲೆಕ್ಕ ಪತ್ರ ಸಮಿತಿ ಮುಂದೆ ಬಂದಿದ್ದು, ಸಮಿತಿಯು ಸದರಿ ಜಮೀನಿನ ಸ್ಥಳ ತನಿಖೆ ನಡೆಸಿದ್ದು, ಸಮಿತಿಯಲ್ಲಿ ಪ್ರಕರಣ ತೀರ್ಮಾನಕ್ಕಾಗಿ ಬಾಕಿ ಇರುತ್ತದೆ ಹಾಗೂ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ರವರ ಪ್ರಕರಣ ಸಂಖ್ಯೆ:ಎಲ್.ಜಿ.ಸಿ(ಎಸ್)267/2023 ರಂತೆ ಪ್ರಕರಣ ದಾಖಲಿಸಲಾಗಿದೆ.

7) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಕುದುರೆಗೆರೆ ಗ್ರಾಮದ ಸರ್ವೆ ನಂ.50, 55, 59 ರ ಜಮೀನುಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ರವರ ಪ್ರಕರಣ ಸಂಖ್ಯೆ:ಎಲ್.ಜಿ.ಸಿ(ಎಸ್)267/2023 ರಂತೆ ಪ್ರಕರಣ ದಾಖಲಿಸಲಾಗಿದೆ.

ಸಂಖ್ಯೆ:ಆರ್.ಡಿ. 178 ಎಲ್.ಜಿ.ಕ್ಯೂ. 2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು